# ಜೊಲ್ಲೆ ಗ್ರೂಪ್

## ವಾರ್ತಾ ಪತ್ರ

# ದರ್ಪಣ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಅಕ್ಟೋಬರ್ 2023–ಸಂಪುಟ–7 ಸಂಚಿಕೆ–11




ನಿಪ್ಪಾಣಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ನಿಪ್ಪಾಣಿ ಸಮಾಧಿ ಮಠದ ಪ.ಪೂ ಶ್ರೀ ಪ್ರಾಣಲಿಂಗ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು.

## ಪ್ರಗತಿ ಪಥದಲ್ಲಿ ಸಾಗುತ್ತಿರುವ ಜೊಲ್ಲೆ ಶಿಕ್ಷಣ ಸಂಸ್ಥೆಯ


## ಡಾ॥ ಬಾಬಾಸಾಹೇಬ ಅಂಬೇಡ್ಕರ ಶಿಕ್ಷಣ ಮಹಾವಿದ್ಯಾಲಯ

ಯುವ ಕಣ್ಮಣಿ, ಜಗತ್ತುಕಂಡ ಶ್ರೇಷ್ಠ ಮಾನವತಾವಾದಿ, ಸ್ವಾಮಿ ವಿವೇಕಾನಂದರ ಸಂದೇಶಗಳಾದ ವ್ಯಕ್ತಿನಿರ್ಮಾಣ, ರಾಷ್ಟ್ರ ನಿರ್ಮಾಣ, ರಾಷ್ಟ್ರಸೇವೆ ಹಾಗೂ ತ್ಯಾಗದ ಪರಮೋಚ್ಚ ಮೌಲ್ಯಗಳು ಭವ್ಯ ಭಾರತದ ಭವಿಷ್ಯ ನಿರ್ಮಿಸಲು ಪಥದರ್ಶಕಗಳಾಗಿವೆ. ಎಂಬೀ ಧ್ಯೇಯೋದ್ದೇಶಗಳೊಂದಿಗೆ ಈ ಭಾಗದ ಪ್ರತಿಷ್ಠಿತ ಜೊಲ್ಲೆ ಶಿಕ್ಷಣ ಸಂಸ್ಥೆಯ ಡಾ॥ ಬಾಬಾಸಾಹೇಬ ಅಂಬೇಡ್ಕರ ಶಿಕ್ಷಣ ಮಹಾವಿದ್ಯಾಲಯ(ಬಿ.ಇಡಿ) 2016ರಲ್ಲಿ ಸ್ಥಾಪನೆಗೊಂಡು ಪ್ರಶಿಕ್ಷಣಾರ್ಥಿಗಳ ಶೈಕ್ಷಣಿಕ ಹಸಿವನ್ನು ತೊಡೆದು ಹಾಕುತ್ತಿರುವ ವಿಶಿಷ್ಟ ತರಬೇತಿ ಸಂಸ್ಥೆಯಾಗಿ ಹೊರಹೊಮ್ಮಿದೆ. ಚಿಕ್ಕೋಡಿ ಜನಪ್ರಿಯ ಸಂಸದರು, ಜೊಲ್ಲೆ ಗ್ರೂಪ್‌ನ ಸಂಸ್ಥಾಪಕರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಹಾಗೂ ಮಾಜಿ ಸಚಿವರು ಹಾಗೂ ನಿಪ್ಪಾಣಿಯ ಜನಪ್ರಿಯ ಶಾಸಕರಾದ ಸೌ ಶಶಿಕಲಾ ಜೊಲ್ಲೆ ಯವರ ದೂರದೃಷ್ಟಿ, ಅಗಾದ ಇಚ್ಛಾಶಕ್ತಿಯಿಂದ, ಗ್ರಾಮೀಣ ಭಾಗದವರಿಗೆ ಶಿಕ್ಷಣ ದೊರಕಿಸುವ ಸದುದ್ದೇಶದಿಂದ ಇಂದು ನಮ್ಮ ಮಹಾವಿದ್ಯಾಲಯ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದೆ. ಇದಕ್ಕೆ ಪೂರಕವಾಗಿ 2021–2022ನೇ ಸಾಲಿನಲ್ಲಿ ಸೌ ಸೀಮಾ ರತ್ನಪ್ಪಗೋಳ ಬೆಳಗಾವಿ ರಾಣಿಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಬಿ.ಇಡಿ.ಯಲ್ಲಿ ತೃತಿಯ ರ‍್ಯಾಂಕ ಪಡೆದುಕೊಂಡು ಮಹಾವಿದ್ಯಾಲಯ ಹಾಗೂ ಸಂಸ್ಥೆಗೆ ಕೀರ್ತಿ ತಂದಿರುವುದು ನಮಗೆ ಅತೀವ ಸಂತಸ ತಂದಿದೆ. ಭಾವಿ ಪ್ರಶಿಕ್ಷಣಾರ್ಥಿಗಳಿಗೆ ಇವರು ಪ್ರೇರಕಶಕ್ತಿಯಾಗಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.

ನಮ್ಮ ಮಹಾವಿದ್ಯಾಲಯ ಇದೀಗ 6 ವರ್ಷಗಳನ್ನು ಪೂರೈಸಿ 7ನೇ ವರ್ಷದಲ್ಲಿ ಕಾಲಿಡುವುದರ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ "ಹೊಸ ಕ್ರಾಂತಿಗೆ" ನಾಂದಿ ಹಾಡಿದೆ. ಅಂದಿನಿಂದ ಇಂದಿನವರೆಗೆ ಪ್ರಶಿಕ್ಷಣಾರ್ಥಿಗಳಿಗೆ ಶೈಕ್ಷಣಿಕಸಮತೆ ಒದಗಿಸಲು ನಿರಂತರವಾಗಿ ಶ್ರಮಿಸುತ್ತಿದೆ. ಸ್ವಚ್ಛಶುದ್ಧಪರಿಸರ, ಸುಸಜ್ಜಿತಕಟ್ಟಡ, ಸುಸಜ್ಜಿತ ಪೀಠೋಪಕರಣ ಹಾಗೂ ಅನುಭವಿ ಶಿಕ್ಷಕರನ್ನು ಕಲ್ಪಿಸಿ ಕೊಡುವುದರ ಮೂಲಕ ಸದಾ ಶಿಕ್ಷಣದ ಗುಣಮಟ್ಟವನ್ನು ವೃದ್ದಿಸಲು ಪ್ರಯತ್ನಿಸುತ್ತಿದೆ. ಪ್ರತಿವರ್ಷ ವಿವಿಧ ಚಟುವಟಿಕೆಗಳು, ಪುನಃಚೇತನ ಕಾರ್ಯಾಗಾರಗಳು ಹಾಗೂ ಅನುಬೋಧನಾ ಕಾರ್ಯಾಗಾರ ಮತ್ತು ಪ್ರಾಯೋಗಿಕ ಪಾಠಬೋಧನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಪ್ರಶಿಕ್ಷಣಾರ್ಥಿಗಳ ಕಲಿಕಾ ಆಸಕ್ತಿ ಮತ್ತು ಒಲವನ್ನು ಹೆಚ್ಚಿಸಿ ಪಾಲ್ಗೊಳ್ಳುವ ಅವಕಾಶಗಳನ್ನು ಕಲ್ಪಿಸಿಕೊಟ್ಟು 100% ಫಲಿತಾಂಶ ಪಡೆಯುತ್ತಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯವಾಗಿದೆ.

ಅಣ್ಣಾಜೀ ಹಾಗೂ ವೈನಿಜಿಯವರ ಶಿಕ್ಷಣದ ಮೇಲಿನ ಅಪಾರ ಪ್ರೇಮದ ದ್ಯೋತಕವಾಗಿ ಶ್ರೀ ಜ್ಯೋತಿಪ್ರಸಾದ ಜೊಲ್ಲೆ ಹಾಗೂ ಶ್ರೀ. ಬಸವಪ್ರಸಾದ ಜೊಲ್ಲೆ ಯವರು ನಮ್ಮ ಜೊತೆಗಿರುವುದರಿಂದ ಮಹಾವಿದ್ಯಾಲಯದ ಚೈತನ್ಯ ಇಮ್ಮಡಿಗೊಂಡು ಉತ್ತಮ ಹೆಜ್ಜೆಗುರುತು ಮೂಡಿಸುತ್ತಿದೆ.


## ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ)





*** ಸಾಧನೆಯ ಪ್ರಮುಖ ಹೆಜ್ಜೆಗುರುತುಗಳು**

1) ಪ್ರತಿವರ್ಷ 100% ಫಲಿತಾಂಶ ಪಡೆಯುತ್ತಿರುವ ಕೀರ್ತಿ.
2) 80% ಮೇಲ್ಪಟ್ಟು ಅಂಕಗಳನ್ನು ಪಡೆಯುತ್ತಿರುವ ಅತಿ ಹೆಚ್ಚು ಪ್ರಶಿಕ್ಷಣಾರ್ಥಿಗಳು.
3) ರಾಷ್ಟ್ರ ಮತ್ತು ರಾಜ್ಯ ಮಟ್ಟದ ವಿಚಾರಸಂಕಿರ್ಣ, ಕಾರ್ಯಾಗಾರಗಳಲ್ಲಿ ಪ್ರಾಚಾರ್ಯರು ಹಾಗೂ ಸಹ ಪ್ರಾಧ್ಯಾಪಕರು ಭಾಗವಹಿಸಿರುವುದು.
4) ಸನ್ 2020 ರಲ್ಲಿ ನಮ್ಮ ಮಹಾವಿದ್ಯಾಲಯದ ಸಹ ಪ್ರಾಧ್ಯಪಕರಾದ ಶ್ರೀ. ಬಿ. ಆರ್. ಕಾಮನಗೊಳ ಧಾರವಾಡದಲ್ಲಿ ಜರುಗಿದ ರಾಜ್ಯಮಟ್ಟದ ಅಖಿಲ ಭಾರತ 7ನೇ ದಲಿತ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಗೆ ಆಯ್ಕೆಯಾಗಿಕವನವನ್ನು ವಾಚನ ಮಾಡಿರುವುದು. ಸನ್ 2023ರು ಅಕ್ಟೋಬರ 2ರಂದು ಗಡಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರ ಆಶ್ರಯದಲ್ಲಿ ಮಲಿಕವಾಡ ಗ್ರಾಮದಲ್ಲಿ ಜರುಗಿದ ಕವಿಗೋಷ್ಠಿಗೆ ಆಯ್ಕೆಯಾಗಿ ಕವನ ವಾಚನ ಮಾಡಿರುವುದು.
5) ಪ್ರಶಿಕ್ಷಣಾರ್ಥಿ ಶ್ರೀಮತಿ ರುಕ್ಮೀಣಿ ನಿಡವಾಣಿ ವಿಶ್ವವಿದ್ಯಾಲಯ ಮಟ್ಟದ "ಚೆಸ್" ಆಟದ ಸ್ಪರ್ಧೆಯಲ್ಲಿ ಭಾಗವಹಿಸಿ "University Blue" ಆಗಿರುವುದು ಹಾಗೂ South Zonalಗೆ ಆಯ್ಕೆಯಾಗಿ ಗುಂಟೂರಿನಲ್ಲಿ ಜರುಗಿದ ಚೆಸ್ ಆಟದ ಸ್ಪರ್ಧೆಯಲ್ಲಿ ಭಾಗವಹಿಸಿರುವುದು.
6) ಪ್ರಶಿಕ್ಷಣಾರ್ಥಿಗಳಾದ ಸಾವಿತ್ರಿ ಐನಾಪೂರೆ, ನೇತ್ರವತಿ ದರಬಾರೆ, ಶಿಲ್ಪಾ ಕುಂಬಾರ ಅಂತರ ಮಹಾವಿದ್ಯಾಲಯ ಮಟ್ಟದ ಭಾಷಣ ಸ್ಪರ್ಧೆಯಲ್ಲಿ ಭಾಗವಹಿದಿರುವುದು.
7) ಪ್ರಶಿಕ್ಷಣಾರ್ಥಿಯಾದ ಕು. ಗೋಪಿಕಾ ಕುಲಕರ್ಣಿ ವಿವಿಧ ಕಾರ್ಯಾಗಾರ, ಸಾಹಿತ್ಯಸಮ್ಮೇಳನ, ಕವಿಗೋಷ್ಠಿ, ವಿಚಾರಸಂಕಿರ್ಣದಲ್ಲಿ ಭಾಗವಹಿಸಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಜರ್ನಲ್‌ಗಳಿಗೆ ಲೇಖನಗಳನ್ನು ಬರೆದಿರುವುದು.

ಸಾಧನೆಯ ಹಿಂದೆ ಸಂಸ್ಥೆಯ ಅಪಾರ ಪರಿಶ್ರಮ, ಸಹಾಯ ಸಹಕಾರ ಹಾಗೂ ಶಿಕ್ಷಕರ ಮತ್ತು ಪ್ರಶಿಕ್ಷಣಾರ್ಥಿಗಳ ನಿರಂತರ ಅಧ್ಯಯನ ಶೀಲತೆ, ಸೃಜನಶೀಲತೆ, ಕ್ರಿಯಾಶೀಲತೆ ಉತ್ತಮ ಸಂಪರ್ಕ, ಉತ್ತಮ ಆಲೋಚನೆಗಳು, ವೈಚಾರಿಕತೆ, ವೈಜ್ಞಾನಿಕತೆ, ಧನಾತ್ಮಕ ಮೌಲ್ಯಗಳು, ಸಂಶೋಧನಾಶೀಲತೆ, ಅತ್ಯುತ್ತಮ ವರ್ತನೆಗಳು, ಭಾವನೆಗಳು, ಉತ್ತಮ್ಮ ಕೌಶಲ್ಯಗಳು, ಶಿಸ್ತುಬದ್ಧತೆ, ನೈತಿಕ ಮೌಲ್ಯಗಳು, ಸಾಮಾಜಿಕ ಮೌಲ್ಯಗಳು, ಬೌದ್ಧಿಕ ಮೌಲ್ಯಗಳು, ಹುರುಪು–ಹುಮ್ಮಸ್ಸು ಇತ್ಯಾದಿಗಳ ಪಾತ್ರ ಮಹತ್ತರವಾಗಿದೆ.

ಸಾಧನೆ ಹಾದಿ ಹೂವಿನ ಹಾಸಿಗೆ ಅಲ್ಲ ಎಂಬುದನ್ನು ಸಾಧನೆಯ ದಾರಿಯಲ್ಲಿ ನಡೆದಾಗಲೇ ಗೊತ್ತಾಗುತ್ತದೆ. ಇದು ಅಕ್ಷರಶಃ ಸತ್ಯ ಎಂಬುದಕ್ಕೆ ನಮ್ಮ ಜೊಲ್ಲೆ ಶಿಕ್ಷಣ ಸಂಸ್ಥೆಯ ಮಹಾವಿದ್ಯಾಲಯದ 6 ವರ್ಷಗಳ ಸುಯಶಸ್ವಿ ಕಥೆ ಜೀವಂತ ಸಾಕ್ಷಿಯಾಗಿದೆ.


ಪ್ರೊ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

# ಇಂಜಿನಿಯರಗಳ ದಿನ-2023

## ಭಾರತದಲ್ಲಿ ಇಂಜಿನಿಯರ್‌ಗಳ ದಿನದ ಆಚರಣೆ ಏಕೆ?

ಸ್ನೇಹಿತರೇ ಭಾರತದಲ್ಲಿ 'ಅಭಿಯಂತರರ ದಿನ'ವನ್ನು ನಮ್ಮ ದೇಶದ ಹೆಮ್ಮೆಯ ಇಂಜಿನಿಯರ್ ಭಾರತ ರತ್ನ ಪ್ರಶಸ್ತಿ ಪುರಸ್ಕೃತರಾದ ಸರ್ ಎಂ ವಿಶ್ವೇಶ್ವರಯ್ಯ ನವರ ಹುಟ್ಟುಹಬ್ಬದ ಸ್ಮರಣಾರ್ಥವಾಗಿ ಸೆಪ್ಟೆಂಬರ್ 15 ರಂದು ಆಚರಣೆ ಮಾಡಲಾಗುತ್ತದೆ. ಈ ದಿನದಂದು ಇವರ ಕೊಡುಗೆ, ಭಾರತೀಯ ಪ್ರಜೆಗಳಿಗೆ ಸರ್.ಎಂ.ವಿ ರವರು ನೀಡಿದ ಅತ್ಯುತ್ತಮ ಸಂದೇಶಗಳನ್ನು ನೆನಪಿಸಿಕೊಳ್ಳುವುದಲ್ಲದೇ, ಭಾರತೀಯ ಪ್ರಜೆಗಳಿಗೆ, ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇವರ ಕೊಡುಗೆಯ ಮಹತ್ವವನ್ನು ವಿಶೇಷವಾಗಿ ತಿಳಿಸುವ ಪ್ರಯತ್ನ ಮಾಡಲಾಗುತ್ತದೆ. ಶಾಲಾ-ಕಾಲೇಜುಗಳಲ್ಲಿ ಈ ದಿನ ಆಚರಣೆ ಜತೆಗೆ, ಸರ್.ಎಂ.ವಿ ಕೊಡುಗೆಯನ್ನು ಸ್ಮರಿಸಲಾಗುತ್ತದೆ. ಸರ್.ಎಂ.ವಿ ವ್ಯಕ್ತಿತ್ವವನ್ನು ಆದರ್ಶವಾಗಿ ಪಡೆಯುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತುಗಳನ್ನು ಹೇಳುವ ಪ್ರಯತ್ನವು ಆಗುತ್ತದೆ.

ವಿಶ್ವೇಶ್ವರಯ್ಯನವರು ಸರ್ ಎಂ ವಿ ಎಂದೇ ಜನಪ್ರಿಯರಾದವರು. ವಿಶ್ವೇಶ್ವರಯ್ಯ ರವರು 1860 ರ ಸೆಪ್ಟೆಂಬರ್ 15 ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ಜನಿಸಿದರು. ಅವರ ತಂದೆ ಹೆಸರು ಶ್ರೀನಿವಾಸ ಶಾಸ್ತ್ರಿ, ತಾಯಿ ಹೆಸರು ವೆಂಕಟಲಕ್ಷ್ಮಮ್ಮ. ಅವರ ಪೂರ್ವಜರು ಈಗಿನ ಆಂಧ್ರ ಪ್ರದೇಶದ ಮೋಕ್ಷಗುಂಡಂ ನಲ್ಲಿ ವಾಸವಾಗಿದ್ದರು. ಆದ ಕಾರಣ ಅವರ ಹೆಸರಿನೊಡನೆ ಮೋಕ್ಷಗುಂಡಂ ಸೇರಿದೆ.

## ಸರ್.ಎಂ.ವಿ ಶಿಕ್ಷಣ

ಬಾಲ್ಯ ಶಿಕ್ಷಣದ ನಂತರ ಮೊದಲಿಗೆ ಸರ್.ಎಂ.ವಿ ರವರು 1881 ರಲ್ಲಿ ಬಿಎ ಪದವಿ ಮುಗಿಸಿದರು. ನಂತರ ಪುಣೆ ವಿಜ್ಞಾನ ಕಾಲೇಜಿನಿಂದ ಸಿವಿಲ್ ಇಂಜಿನಿಯರಿಂಗ್ ಪದವಿ ಪಡೆದರು.

## ವೃತ್ತಿ ಜೀವನ

ಇಂಜಿನಿಯರಿಂಗ್ ಪದವಿ ಮುಗಿದ ನಂತರ ವೃತ್ತಿ ಜೀವನಕ್ಕೆ ಕಾಲಿಟ್ಟ ಅವರು.. 1907 ರವರೆಗೆ ಮುಂಬೈ ಸರ್ಕಾರದಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಹೊಂದಿದರು. ನಂತರ ಇಡೀ ಭಾರತ ದೇಶದಲ್ಲಿ ತಮ್ಮ ಪ್ರತಿಭೆ ಇಂದ ಕಾರ್ಯವನ್ನು ನಿರ್ವಹಿಸುತ್ತಾ ಹಲವು ಕೊಡುಗೆಗಳನ್ನು ನೀಡುತ್ತ ಬಂದರು. ಪುಣೆ, ಕೊಲ್ಹಾಪುರ, ಸೋಲಾಪುರ, ವಿಜಾಪುರ, ಧಾರವಾಡ ನಗರಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಶ್ರಮಿಸಿದವರು ಸರ್.ಎಂ.ವಿ. ದೇಶದ ಪ್ರಮುಖ ಇಂಜಿನಿಯರ್ ಆಗಿ ಇವರು ಸಲ್ಲಿಸಿದ ಸೇವೆ ಹಾಗೂ ಕೊಡುಗೆಗಳಿಗಾಗಿ ಅವರಿಗೆ 1955 ರಲ್ಲಿ ಭಾರತ ಸರ್ಕಾರದ ಅತ್ಯುನ್ನತ ಗೌರವವಾದ 'ಭಾರತ ರತ್ನ' ಪ್ರಶಸ್ತಿ ನೀಡಲಾಯಿತು. ಈ ಗೌರವಕ್ಕೆ ಪಾತ್ರರಾದ ಮೊದಲ ಕನ್ನಡಿಗ ಸರ್ ಎಂ ವಿಶ್ವೇಶ್ವರಯ್ಯನವರೇ.

ವಿಶ್ವೇಶ್ವರಯ್ಯ ರವರು 1860 ರಿಂದ ಏಪ್ರಿಲ್ 14, 1962 ರವರೆಗೆ ಅಂದರೆ 101 ವರ್ಷ ಬದುಕಿದ್ದರು. ಸರ್.ಎಂ.ವಿ ತಮ್ಮ ತಂದೆಯ ಶ್ರಾದ್ಧದ ದಿನವೇ ಇಹಲೋಕ ತ್ಯಜಿಸಿದರು.

ಸ್ನೇಹಿತರೇ ಮಂಡ್ಯ ಜಿಲ್ಲೆಯ ಪ್ರಮುಖ ಆಣೆಕಟ್ಟಾದ ಕಾವೇರಿ ನದಿ ನೀರಿಗೆ ಅಡ್ಡಲಾಗಿ ಕಟ್ಟಲಾದ ಕನ್ನಂಬಾಡಿ ಆಣೆಕಟ್ಟಿನ ವಿನ್ಯಾಸಕಾರರು ಸರ್.ಎಂ.ವಿ ರವರು. ಮೈಸೂರಿನಿಂದ ಬೆಂಗಳೂರಿನವರೆಗೆ ಹಲವು ನಗರ, ಪಟ್ಟಣ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುತ್ತಿರುವ, ವ್ಯವಸಾಯಕ್ಕೆ ಆಧಾರ ಜಲಾಶಯ ಈ ಆಣೆಕಟ್ಟಿನ ನೀರು. ಮೈಸೂರು, ಮಂಡ್ಯ, ರಾಮನಗರ, ಬೆಂಗಳೂರು, ತಮಿಳುನಾಡು ರಾಜ್ಯಕ್ಕೆ ಈ ಆಣೆಕಟ್ಟಿನ ಕೊಡುಗೆ ಅಪಾರ. ಇದು ಅವರ ಜೀವನಾಡಿ ಎಂದರೆ ತಪ್ಪಾಗಲಾರದು.

## ಸರ್.ಎಂ.ವಿ ರವರು ಪ್ರಜೆಗಳಿಗೆ ಹೇಳಿದ ಕಿವಿಮಾತುಗಳು

* 'ಹಣವಿದ್ದರೆ ಸಾಲದು. ಒಳ್ಳೆಯ ವ್ಯಕ್ತಿತ್ವ ಇದ್ದರಷ್ಟೇ ಸಮಾಜ ಗೌರವಿಸುತ್ತದೆ'.
* 'ಪದವಿ ಪ್ರಜಾಸೇವೆಗೆ ಹೊರತು ಸ್ವಂತ ಲಾಭಕ್ಕಾಗಿ ಅಲ್ಲ'.
* 'ವಿದ್ಯಾರ್ಥಿಗಳು ಪ್ರತಿ ಕ್ಷಣವನ್ನು ಮೌಲ್ಯಯುತವಾಗಿ ಶ್ರಮಿಸಿದರೆ ಅಂದುಕೊಂಡಿದ್ದನ್ನು ಸಾಧಿಸಬಹುದು'.

ಸರ್ ಎಂ ವಿಶ್ವೇಶ್ವರಯ್ಯರವರ ಸ್ಮರಣಾರ್ಥ ಅವರ ಬಗ್ಗೆ ಮೇಲಿನ ವಿಷಯಗಳನ್ನು ಮನನಮಾಡುತ್ತ, ಅವರ ಕೊಡುಗೆ ನೆನೆಯುತ್ತ, ಘೋಷವಾಕ್ಯಗಳನ್ನು ನೆನೆಯುವುದು ಭಾರತದ ಇಂಜಿನಿಯರ್‌ಗಳ ದಿನದ ಆಚರಣೆ ಹಾಗೂ ವಿಶೇಷತೆ ಆಗಿದೆ.

# ವಿಶ್ವ ತೆಂಗಿನಕಾಯಿ ದಿನ -2023

ತೆಂಗಿನಮರವನ್ನು ಕಲ್ಪವೃಕ್ಷವೆಂದು ಕರೆಯುತ್ತಾರೆ. ಯಾಕೆಂದರೆ ಇದು ಕೇಳಿದ್ದನ್ನೆಲ್ಲಾ ಒದಗಿಸುವ, ಹಲವು ಆರೋಗ್ಯಕರ ಗುಣವುಳ್ಳ ಮರ. ವಿಶ್ವ ತೆಂಗಿನಕಾಯಿ ದಿನವನ್ನು ಸೆಪ್ಟೆಂಬರ್ 2ರಂದು ಆಚರಿಸಲಾಗುತ್ತದೆ. ಈ ದಿನದ ಇತಿಹಾಸ, ಮಹತ್ವವೇನು ಎಂಬುದನ್ನು ತಿಳಿದುಕೊಳ್ಳೋಣ.

ಭಾರತದಲ್ಲಿ ತೆಂಗಿನ ಕಾಯಿಯನ್ನು ಬಳಸದವರು ವಿರಳ. ಅದರಲ್ಲೂ ಕರ್ನಾಟಕದ ಮಂದಿಯ ಆಹಾರಶೈಲಿಯಲ್ಲಿ ತೆಂಗಿಗೆ ಖಾಯಂ ಸ್ಥಾನ ಇರುತ್ತದೆ. ದೇಶದಲ್ಲಿ ಅತಿ ಹೆಚ್ಚು ತೆಂಗು ಬೆಳೆಯುವ ರಾಜ್ಯಗಳಲ್ಲಿ ಕರ್ನಾಟಕ ಅಗ್ರಪಂಕ್ತಿಗೆ ಬರುತ್ತದೆ. ತೆಂಗು ಅಕ್ಷರಶಃ ಕಲ್ಪವೃಕ್ಷ. ಇದರ ಪ್ರತಿಯೊಂದು ಭಾಗವೂ ಪ್ರಯೋಜನಕಾರಿ. ಬಾಯಿ ರುಚಿಯಿಂದ ಹಿಡಿದು ಔಷಧದವರೆಗೂ ಇದು ಉಪಯುಕ್ತವಾಗಿದೆ. ಮಾತ್ರವಲ್ಲ ಹಲವು ಆರೋಗ್ಯಕರ ಗುಣಗಳನ್ನು ಹೊಂದಿದೆ. ತೆಂಗಿನಕಾಯಿ ಮತ್ತು ಎಳನೀರಿನ ಪ್ರಯೋಜನಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಏಷ್ಯಾ-ಪೆಸಿಫಿಕ್ ಪ್ರದೇಶದಲ್ಲಿ ಪ್ರತೀ ವರ್ಷ ವಿಶ್ವ ತೆಂಗು ದಿನವನ್ನು ಆಚರಿಸಲಾಗುತ್ತಿದೆ.

## ವಿಶ್ವ ತೆಂಗಿನಕಾಯಿ ದಿನದ ಇತಿಹಾಸ

ತೆಂಗಿನಕಾಯಿಯನ್ನು ಆಹಾರ ಇಂಧನ, ಔಷಧ ಸೌಂದರ್ಯ ವರ್ಧಕಗಳು ಮತ್ತು ಇತರ ಹಲವು ವಸ್ತುಗಳಂತಹ ಬಹುಮುಖಿ ಬಳಕೆಗಳಿಂದಾಗಿ 'ಜೀವನದ ಮರ' ಎಂದು ಉಲ್ಲೇಖಿಸಲಾಗುತ್ತದೆ. ವಿಶ್ವ ತೆಂಗಿನಕಾಯಿ ದಿನವನ್ನು ಸೆಪ್ಟೆಂಬರ್ 2, 2009ರಂದು ಆಚರಿಸಲಾಯಿತು. ಏಷ್ಯಾ ಪೆಸಿಫಿಕ್ ತೆಂಗಿನಕಾಯಿ ಸಮುದಾಯ (APCC) ತೆಂಗಿನಕಾಯಿಗಳ ಮೌಲ್ಯ ಮತ್ತು ಸಮಾಜದ ಮೇಲೆ ಅವುಗಳ ಪ್ರಭಾವದ ಬಗ್ಗೆ ಗಮನ ಸೆಳೆಯಲು ಈ ದಿನವನ್ನು ಆಚರಿಸಲು ನಿರ್ಧರಿಸಿತು.

ಅಂದಿನಿಂದ, UN-ESCAP (ಯುನೈಟೆಡ್ ನೇಷನ್ಸ್ ಎಕನಾಮಿಕ್ ಅಂಡ್ ಸೋಶಿಯಲ್ ಕಮಿಷನ್ ಫಾರ್ ದಿ ಏಷ್ಯಾ ಪೆಸಿಫಿಕ್) ತಮ್ಮ ಕಾರ್ಯಕ್ರಮಗಳನ್ನು ಉತ್ತೇಜಿಸಲು, ಈ ಉಷ್ಣವಲಯದ ಹಣ್ಣನ್ನು ಪ್ರಚಾರ ಮಾಡುವ ಕ್ರಮವನ್ನು ಸ್ಮರಿಸಲು ಮತ್ತು ಅದರ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ವಾರ್ಷಿಕವಾಗಿ ಈ ದಿನವನ್ನು ಆಯೋಜಿಸಲು APCC ಗೆ ಅಧಿಕಾರ ನೀಡಿದೆ. ತೆಂಗು ಅಭಿವೃದ್ಧಿ ಮಂಡಳಿ (CDB) ಸಹಾಯದಿಂದ ಈ ದಿನವನ್ನು ಭಾರತದಲ್ಲಿ ಕೇರಳ, ತಮಿಳುನಾಡು, ಕರ್ನಾಟಕ, ಗೋವಾ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಒರಿಸ್ಸಾ ಮುಂತಾದ ರಾಜ್ಯಗಳಲ್ಲಿ ಆಚರಿಸಲಾಗುತ್ತದೆ.

## ವಿಶ್ವ ತೆಂಗಿನಕಾಯಿ ದಿನದ ಮಹತ್ವ

ವಿಶ್ವ ತೆಂಗಿನಕಾಯಿ ದಿನವನ್ನು ಸೆಪ್ಟೆಂಬರ್ 2ರಂದು ಆಚರಿಸಲಾಗುತ್ತದೆ. ತೆಂಗಿನಕಾಯಿಯ ಮೌಲ್ಯ ಮತ್ತು ಪ್ರಯೋಜನಗಳ ಬಗ್ಗೆ ಎಲ್ಲರಲ್ಲೂ ಅರಿವು ಮೂಡಿಸಲು ಈ ದಿನವನ್ನು ಆಚರಿಸಲು ನಿರ್ಧರಿಸಲಾಯಿತು.. ಪ್ರಪಂಚದಾದ್ಯಂತ ಹೆಚ್ಚು ಸೇವಿಸುವ ಹಣ್ಣುಗಳಲ್ಲಿ ತೆಂಗಿನಕಾಯಿ ಸಹ ಸ್ಥಾನ ಪಡೆದಿದೆ. ಇದಲ್ಲದೆ, ಹಣ್ಣಿನ ವಿವಿಧೋದ್ದೇಶ ಸ್ವಭಾವವು ಅದನ್ನು ಆರೋಗ್ಯಕರವೆಂದು ಪರಿಗಣಿಸುವಂತೆ ಮಾಡಿದೆ. ತೆಂಗಿನ ಹಾಲನ್ನು ಸೌಂದರ್ಯವರ್ಧಕ ಉತ್ಪನ್ನಗಳಲ್ಲಿ ಸಹ ಬಳಸುತ್ತಾರೆ. ತೆಂಗಿನಕಾಯಿ ಡ್ರೂಪ್ ಕುಟುಂಬದ ಉತ್ಪನ್ನವಾಗಿದೆ. ಮತ್ತು ಹೆಚ್ಚಾಗಿ ಉಷ್ಣವಲಯದ ದೇಶಗಳಲ್ಲಿ ಕಂಡುಬರುತ್ತದೆ. ಏಷ್ಯನ್-ಪೆಸಿಫಿಕ್ ಪ್ರದೇಶದಲ್ಲಿ ತೆಂಗಿನಕಾಯಿ ಹೆಚ್ಚು ಜನಪ್ರಿಯವಾಗಿದೆ.

## ತೆಂಗಿನಕಾಯಿ ಬಗ್ಗೆ ನೀವು ತಿಳಿದಿರದ ಸಂಗತಿಗಳು

ತೆಂಗಿನಕಾಯಿ ಎಂಬ ಹೆಸರು ಪೋರ್ಚುಗೀಸ್ ಪದ "ಕೊಕೊ"ದಿಂದ ಬಂದಿದೆ, ಇದರರ್ಥ 'ತಲೆಬುರುಡೆ' ಎಂಬುದಾಗಿದೆ. ತೆಂಗಿನಕಾಯಿ ಮೊದಲು ಇಂಡೋ-ಮಲಯನ್ ಪ್ರದೇಶದಲ್ಲಿ ಎಲ್ಲೋ ಹುಟ್ಟಿಕೊಂಡಿದೆ ಎಂದು ಹೇಳಲಾಗುತ್ತದೆ. ವೈಜ್ಞಾನಿಕವಾಗಿ ಕೊಕೊಸ್ ನ್ಯೂಸಿಫೆರಾ ಎಂದು ಕರೆಯಲ್ಪಡುವ ತೆಂಗಿನ ಮರವು 82 ಅಡಿ ಅಥವಾ 25 ಮೀಟರ್ ಎತ್ತರವನ್ನು ತಲುಪಬಹುದು. ತೆಂಗಿನಕಾಯಿಗಳು ನೀರಿನಲ್ಲಿ ಸುಲಭವಾಗಿ ತೇಲುತ್ತವೆ.

ವಿಶ್ವಾದ್ಯಂತ ಹೆಚ್ಚು ತೆಂಗಿನಕಾಯಿಯನ್ನು ಉತ್ಪಾದಿಸುವ ಮೂರು ದೇಶಗಳು ಭಾರತ, ಇಂಡೋನೇಷ್ಯಾ ಮತ್ತು ಫಿಲಿಪೈನ್ಸ್ ಆಗಿದೆ. ಸಂಸ್ಕೃತದಲ್ಲಿ, ತೆಂಗಿನ ಮರವನ್ನು "ಕಲ್ಪವೃಕ್ಷ," ಅಥವಾ "ಸ್ವರ್ಗದ ಮರ" ಎಂದು ಉಲ್ಲೇಖಿಸಲಾಗುತ್ತದೆ ಏಕೆಂದರೆ ಅದು ಬದುಕುಳಿಯಲು ಅಗತ್ಯವಿರುವ ಎಲ್ಲವನ್ನೂ ಒದಗಿಸುತ್ತದೆ.

# ಡಾ|| ಬಾಬಾಸಹೇಬ ಅಂಬೇಡ್ಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆ




ಜೊಲ್ಲೆ ಶಿಕ್ಷಣ ಸಂಸ್ಥೆಯ ಡಾ|| ಬಾಬಾಸಾಹೇಬ ಅಂಬೇಡ್ಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಡಾ|| ಸರ್ವಪಲ್ಲಿ ರಾಧಾಕೃಷ್ಣನ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮುಖಾಂತರ ಕಾರ್ಯಕ್ರಮ ಪ್ರಾರಂಭವಾಯಿತು.


ಕಾರ್ಯಕ್ರಮದಲ್ಲಿ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನಾಡುತ್ತ ಕಾಲೇಜಿನ ಉಪನ್ಯಾಸಕರಾದ ಶ್ರೀ. ಆರ್. ಎನ್. ಸನದಿಯವರು "ಗುರು ಶಿಷ್ಯರ ಪರಂಪರೆ, ಓದುವ ಹವ್ಯಾಸ, ಸಾಹಿತ್ಯದ ಕುರಿತು ಮಾತನಾಡಿದರು". ಕಾರ್ಯಕ್ರಮದ ಮುಖ್ಯ ಅತಿಥಿ ಸ್ಥಾನವನ್ನು ಉಪನ್ಯಾಸಕರಾದ ಶ್ರೀ. ಸಿ. ಆರ್. ಬಸ್ತವಾಡೆಯವರು ವಹಿಸಿ "ಒಬ್ಬ ಸಮರ್ಥ ಶಿಕ್ಷಕನ ಗುಣಲಕ್ಷಣ ಹಾಗೂ ಶಿಕ್ಷಕ ವೃತಿಯ ಮಹತ್ವ ಹಾಗೂ ಡಾ. ಸರ್ವಪಲ್ಲಿ ರಾಧಾಕೃಷ್ಣ ರವರ ಜೀವನ ಚರಿತ್ರೆ, ಅವರು ಶಿಕ್ಷಣಕ್ಕೆ, ಭೋಧನಗೆ ಹಾಗೂ ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು. ಅವರ ಕಾರ್ಯದಕ್ಷತೆ, ವಿದ್ಯಾರ್ಥಿಗಳ ಮೇಲೆ ಇರುವ ಅವರ ಪ್ರೀತಿ ನಾಯಕತ್ವದ ಕುರಿತು" ತಿಳಿಹೇಳಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಉಪನ್ಯಾಸಕರಾದ ಶ್ರೀ. ಬಿ. ಆರ್. ಕಾಮನಗೋಳ ವಹಿಸಿ "ಸೇವೆ, ಪ್ರಾಮಾಣಿಕತೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧ ಮತ್ತು ಭಾವನೆ, ಕಾರ್ಯದಕ್ಷತೆ, ಒಬ್ಬ ಶಿಕ್ಷಕನಿಗೆ ಇರಬೇಕಾದ ವೃತ್ತಿಕೌಶಲ್ಯ, ಶಿಸ್ತು ಹಾಗೂ ವಿಷಯಪ್ರಭುತ್ವ" ಕುರಿತು ಮಾತನಾಡಿದರು.

ಕಾಲೇಜಿನ ಉಪನ್ಯಾಸಕರಾದ ಶ್ರೀ. ಬಿ. ಎಸ್. ಮುಕರೆ ವಂದಿಸಿದರು. ಪ್ರಶಿಕ್ಷಣಾರ್ಥಿಯಾದ ಶ್ರೀಮತಿ ರೋಹಿನಿ ಖೋತ ಪ್ರಾರ್ಥಿಸಿದರು. ಪ್ರಶಿಕ್ಷಣಾರ್ಥಿಯಾದ ಕು. ವಿನೋದ ಹಾಲಪ್ಪಗೋಳ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಎಲ್ಲ ಉಪನ್ಯಾಸಕರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಕು. ವಿನೋದ ಹಾಲಪ್ಪಗೋಳ
ಪ್ರಶಿಕ್ಷಣಾರ್ಥಿ, ದ್ವಿತಿಯ ಸಮೇಸ್ಟರ್
ಡಾ|| ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ






**ಉದ್ಘಾಟನೆ**

ಹುಕ್ಕೇರಿಯಲ್ಲಿ ಜಿಲ್ಲಾ ಪಂಚಾಯತ ಬೆಳಗಾವಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಹುಕ್ಕೇರಿ ಇವರ ಸಂಯುಕ್ತ ಆಶ್ರಯದಲ್ಲಿ ಶಿಕ್ಷಕರ ದಿನಾಚರಣೆ ಹಾಗೂ ಕ್ರೀಡಾಕೂಟ ಮತ್ತು ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆಯವರು ಉದ್ಘಾಟಿಸುತ್ತಿರುವುದು.




**ಚಾಲನೆ ನಿಡುತ್ತಿರುವುದು**

ನಿಪ್ಪಾಣಿ ನಗರದಲ್ಲಿ ವೇದಗಂಗಾ ರೈತ ಉತ್ಪಾದಕರ ಕಂಪನಿ ಲಿ., ಇದರ 3 ನೇ ವಾರ್ಷಿಕ ಸರ್ವ ಸದಸ್ಯರ ಸಾಧಾರಣ ಸಭೆಯನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡುತ್ತಿರುವುದು.



**ವಿಶೇಷ ಒಲಿಂಪಿಕ್ಸ ಭಾರತ**

ಬೆಂಗಳೂರು ವಿಶೇಷಚೇತನ ಮಕ್ಕಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾಕೂಟ ಹಮ್ಮಿಕೊಳ್ಳುವ ವಿಶೇಷ ಒಲಿಂಪಿಕ್ಸ್ ಭಾರತ ಇದರ ಕರ್ನಾಟಕ ರಾಜ್ಯ ಚುನಾವಣೆ ಬೆಂಗಳೂರಿನಲ್ಲಿ ನಡೆದಿದ್ದು, ಕರ್ನಾಟಕದಿಂದ ಅಧ್ಯಕ್ಷರಾಗಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರ ಆಯ್ಕೆಯಾಗಿದ್ದಾರೆ.




**ಉದ್ಘಾಟಿಸುತ್ತಿರುವುದು**

ಶಿವಾಪೂರವಾಡಿ ಗ್ರಾಮದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಜನಪ್ರಿಯ ಶಾಸಕರಾದ ಸೌ.ಶಶಿಕಲಾ ಜೊಲ್ಲೆ ಯವರ ವಿಶೇಷ ಪ್ರಯತ್ನದಿಂದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಅತ್ಯಾಧುನಿಕ ವ್ಯಾಯಾಮ ಶಾಲೆಯನ್ನು(ಜಿಮ್) ಬಸವಜ್ಯೋತಿ ಯೂಥ್ ಫೌಂಡೇಶನ ಅಧ್ಯಕ್ಷ್ಯರಾದ ಶ್ರೀ. ಬಸವಪ್ರಸಾದ ಜೊಲ್ಲೆ ಯವರು ಉದ್ಘಾಟಿಸಿದ ದೃಶ್ಯ



**ಚಾಲನೆ ನೀಡುತ್ತಿರುವುದು**

ಚಿಕ್ಕೋಡಿಯ ಶಿರಗಾಂವ ಗ್ರಾಮದಲ್ಲಿ ಶ್ರಾವಣ ಮಾಸದ ಜಾತ್ರೆಯ ನಿಮಿತ್ಯ ಭೇಟಿ ನೀಡಿ ಅಂತರಾಷ್ಟ್ರೀಯ ಹೆಸರಾಂತ ಮಲ್ಲರ ನಿಖಾಲಿ ಜಂಗಿ ಕುಸ್ತಿ ಪಂದ್ಯಾವಳಿಗೆ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಚಾಲನೆ ನೀಡುತ್ತಿರುವ ದೃಶ್ಯ.



**ಚಾಲನೆ ನೀಡುತ್ತಿರುವುದು**

ನಿಪ್ಪಾಣಿ ನಗರದ ಅಕ್ಕೊಳ ಕ್ರಾಸ್ ಪಾರ್ವತಿ ಕಾರ್ನರ್‌ದಿಂದ ಹಾಲಸಿದ್ದನಾಥ ಮಂದಿರವರೆಗೆ ರಸ್ತೆಯ 2 ಬದಿಯಲ್ಲಿ ವಿವಿಧ ಪ್ರಕಾರದ ಹೂಗಳ ಸಸಿ ನೆಡುವ ಕಾರ್ಯಕ್ರಮಕ್ಕೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡಿದರು.



**"ಸಸ್ಯ ಶ್ಯಾಮಲ" ಅಭಿಯಾನ**

ನಿಪ್ಪಾಣಿ ನಗರದಲ್ಲಿ ಶಿಕ್ಷಣ ಇಲಾಖೆ ಮತ್ತು ಅರಣ್ಯ ಇಲಾಖೆಯ ಸಹಯೋಗದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ "ಸಸ್ಯ ಶ್ಯಾಮಲ" ಅಭಿಯಾನಕ್ಕೆ ಸಸಿ ನೆಡುವುದರ ಮೂಲಕ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡುತ್ತಿರುವ ದೃಶ್ಯ.



**ಚಾಲನೆ ನೀಡುತ್ತಿರುವುದು**

ಬೋರಗಾಂವ ಪಟ್ಟಣದಲ್ಲಿ ಚಾತುರ್ಮಾಸ ನಿಮಿತ್ಯ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಜೊಲ್ಲೆ ದಂಪತಿ ಭಾಗವಹಿಸಿ, ಪರಮ ಪೂಜ್ಯರು, ಸಂಸ್ಕಾರ ಶಿರೋಮಣಿ, ಆಚಾರ್ಯ ರತ್ನ ಶ್ರೀ 108 ಮುನಿ ಕುಲರತ್ನ ಭೂಷಣ ಮಹಾರಾಜ ದಿವ್ಯ ಸಾನಿಧ್ಯದಲ್ಲಿ "ಮುಕುಟಸಪ್ತಮಿ" ಕಾರ್ಯಕ್ರಮಕ್ಕೆ ಧ್ವಜಾರೋಹಣ ನೆರವೇರಿಸುವ ಮೂಲಕ ಚಾಲನೆ ನೀಡುತ್ತಿರುವುದು.




**ಚೆಕ್ ವಿತರಣೆ**

ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೊಸಾಯಟಿ ಲಿ.,ಯಕ್ಸಂಬಾ (ಮಲ್ಟಿ-ಸ್ಟೇಟ್) ಮಂಗಸೂಳಿ ಶಾಖೆಯ ಶಾಖಾ ಸಲಹಾ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ದಿ. ಸಂಜಯ ಶ್ರೀಕಾಂತ ಶೆಟ್ಟಿ ಇವರು ಅಕಾಲಿಕ ನಿಧನರಾದ ಪ್ರಯುಕ್ತ, ಅವರ ಧರ್ಮಪತ್ನಿಯವರಾದ ಶ್ರೀಮತಿ ಪ್ರತಿಭಾ ಸಂಜಯ ಶೆಟ್ಟಿ ಅವರಿಗೆ 10 ಲಕ್ಷ ರೂಪಾಯಿಗಳ ಮೊತ್ತದ ವಿಮಾ ಚೆಕ್‌ನ್ನು ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ನೀಡುತ್ತಿರುವುದು.



**ಅಭಿಯಾನಕ್ಕೆ ಚಾಲನೆ**

ಚಿಕ್ಕೋಡಿ ಪಟ್ಟಣದಲ್ಲಿ ಭಾರತೀಯ ಜನತಾ ಪಕ್ಷ ಚಿಕ್ಕೋಡಿ ಜಿಲ್ಲೆಯ ವತಿಯಿಂದ ಆಯೋಜಿಸಿದ್ದ "ನನ್ನ ಮಣ್ಣು ನನ್ನ ದೇಶ" (ಮೇರಿ ಮಿಟ್ಟಿ ಮೇರಾ ದೇಶ) ಅಭಿಯಾನಕ್ಕೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಚಾಲನೆ ನೀಡುತ್ತಿರುವ ದೃಶ್ಯ.



**ಸತ್ಕರಿಸುತ್ತಿರುವುದು**

ನಿಪ್ಪಾಣಿ ಮತಕ್ಷೇತ್ರದ ಆಡಿ ಗ್ರಾಮದ ಹೆಮ್ಮೆಯ ಸುಪುತ್ರ ಶ್ರೀ ಕೆರಬಾ ಆನಂದ ಲೋಹಾರ ಅವರ ಬೆಂಗಳೂರಿನಲ್ಲಿರುವ ಇಸ್ರೋದ URSC/LEOS ಇದರಲ್ಲಿ ಉಪಯೋಜನಾ ನಿರ್ದೇಶಕರಾಗಿ ಕೆಲಸ ನಿರ್ವಹಿಸುತ್ತಿದ್ದು, ಚಂದ್ರಯಾನ-3 ಯಶಸ್ವಿ ರೂವಾರಿಗಳಾದ ಹಿನ್ನೆಲೆ ಅವರ ನಿವಾಸಕ್ಕೆ ಬಸವಜ್ಯೋತಿ ಯೂಥ್ ಫೌಂಡೇಶನ ಅಧ್ಯಕ್ಷರಾದ ಶ್ರೀ. ಬಸವಪ್ರಸಾದ ಜೊಲ್ಲೆ ಯವರು ತೆರಳಿ ಹೂ ಗುಚ್ಛ ನೀಡಿ ಸತ್ಕರಿಸುತ್ತಿರುವ ದೃಶ್ಯ.



**ಶಿಕ್ಷಕರ ದಿನಾಚರಣೆ**

ಆಶಾಜ್ಯೋತಿ ವಿಶೇಷ ಮಕ್ಕಳ ಉಚಿತ ವಸತಿ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಹಾಗೂ ಸೌ. ಪ್ರಿಯಾ ಜೊಲ್ಲೆ ಯವರು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಗೌರವ ನಮನಗಳನ್ನು ಸಲ್ಲಿಸುತ್ತಿರುವ ದೃಶ್ಯ.

ಜೊಲ್ಲೆ ಉದ್ಯೋಗ ಸಮೂಹ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ- 591244 Ph : 9844469288 / 7760983792 E-mail : darpanjus6@gmail.com

ಪ್ರಧಾನ ಸಂಪಾದಕರು :- ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ